**ಶಾಲಾ ಮಟ್ಟದ ಪೂರ್ವ ಸಿದ್ಧತಾ ಪರೀಕ್ಷೆ, ಜನವರಿ – 2024**

**ಅವಧಿ : 3 ಗಂಟೆ 15 ನಿಮಿಷ** **ವಿಷಯ : ಪ್ರಥಮ ಭಾಷೆ – ಕನ್ನಡ (01K)** **ಗರಿಷ್ಠ ಅಂಕಗಳು : 100**

**I.** ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ ಕ್ರಮಾಕ್ಷರದೊಂದಿಗೆ ಬರೆಯಿರಿ. **6x1=6**

1. 'ಸೂರ್ಯೋದಯ' ಪದವು ಈ ಸಂಧಿಗೆ ಉದಾಹರಣೆಯಾಗಿದೆ.
ಎ) ಸವರ್ಣದೀರ್ಘಸಂಧಿ ಬಿ) ಗುಣಸಂಧಿ ಸಿ) ವೃದ್ಧಿಸಂಧಿ ಡಿ) ಯಣ್‌ಸಂಧಿ

ಒಬ್ಬರು ಹೇಳಿದ ಮಾತನ್ನು ಯಥಾವತ್ತಾಗಿ ಬರೆಯುವಾಗ ಬಳಸುವ ಲೇಖನ ಚಿಹ್ನೆ.
ಎ) ಉದ್ಧರಣ ಚಿಹ್ನೆ ಬಿ) ಆವರಣ ಚಿಹ್ನೆ ಸಿ) ವಾಕ್ಯ ವೇಷ್ಟನ ಚಿಹ್ನೆ ಡಿ) ಭಾವಸೂಚಕ ಚಿಹ್ನೆ

3. 'ಮುಕ್ಕಣ್ಣು' ಪದವು ಈ ಸಮಾಸವಾಗಿದೆ.
ಎ) ದ್ವಿಗು ಬಿ) ಗಮಕ ಸಿ) ಬಹುವ್ರೀಹಿ ಡಿ) ಅಂಶಿ

4. ಹಳಗನ್ನಡದಲ್ಲಿ'ಅಧಿಕರಣ' ಕಾರಕಾರ್ಥದ ವಿಭಕ್ತಿ ಪ್ರತ್ಯಯ
ಎ) ಇಂದಂ ಬಿ) ಒಳ್ ಸಿ) ಅಂ ಡಿ) ಅತ್ತಣಿಂದಂ

5. 'ನೋಡು' ಧಾತುವಿನ ನಿಷೇಧಾರ್ಥಕ ರೂಪ.
ಎ)ನೋಡಲಿ ಬಿ)ನೋಡನು ಸಿ) ನೋಡಿಯಾನು ಡಿ) ನೋಡದು

6. ರೊಯ್ಯನೆ, ಸುಯ್ಯನೆ ಪದಗಳು ಈ ಅವ್ಯಯಕ್ಕೆ ಉದಾಹರಣೆಯಾಗಿದೆ.
ಎ) ಅನುಕರಣಾವ್ಯಯ ಬಿ) ಅವಧಾರಣಾರ್ಥಕ ಸಿ) ಕ್ರಿಯಾರ್ಥಕ ಡಿ) ಸಾಮಾನ್ಯಾರ್ಥಕ

**II.** ಕೆಳಗಿನ ಪ್ರಶ್ನೆಗಳಿಗೆ ಮೊದಲೆರೆಡು ಪದಗಳಿಗಿರುಗೆ ಸಂಬಂಧದಂತೆ ಮೂರನೆಯ ಪದಕ್ಕೆ ಸರಿಹೊಂದುವ ಸಂಬಂದೀ ಪದವನ್ನು ಬರೆಯಿರಿ. **4*1=4**

7. ಕೆನೆಮೊಸರು : ಜೋಡುನುಡಿ : : ಬಟ್ಟಬಯಲು : ______________
8. ಹ್ರಸ್ವಸ್ವರಗಳು : 06 : : ಅನುನಾಸಿಕಗಳು : ________
9. ಹನ್ನೆರಡು : ಸಂಖ್ಯಾವಾಚಕ : : ಮೂಡಣ : ______________
10. ದಿಟ್ಟಿ : ದೃಷ್ಟಿ : : ತವಸಿ : ____________

**III** ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ. **7x1=7**

11. ಹಿತವಚನವು ಮನಸ್ಸಿನ ಕೊಳೆಯನ್ನು ಹೇಗೆ ತೊಳೆಯುತ್ತದೆ?
12. ಸುಕುಮಾರಸ್ವಾಮಿಗೆ ಯಾವ ಪಟ್ಟ ಕಟ್ಟಲಾಯಿತು.?.
13. ಯುದ್ಧದ ಬಗ್ಗೆ ಮುದುಕಿಯ ಅಭಿಪ್ರಾಯವೇನು?
14. ದುಷ್ಟಬುದ್ಧಿಯು ಧರ್ಮಬುದ್ಧಿಯ ಮೇಲೆ ಯಾವ ಆರೋಪವನ್ನು ಹೊರಿಸಿದನು?
15. ಹಲಗಲಿಯ ನಾಲ್ವರು ಬಂಟರು ಯಾರು?
16. ಆಶ್ವಯುಜದ ಬತ್ತದ ಗದ್ದೆಯ ಬಣ್ಣ ಯಾವ ಹಸುರಿನಂತಿದೆ?
17. ಪುಟ್ಟ ಪೋರಿ ಏನು ಮಾಡುತ್ತಿದ್ದಾಳೆ?

**IV** ಕೆಳಗಿನ ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ. **10x2=20**

18. ಲಂಡನ್ನಿನ ಹೆಣ್ಣು ಮಕ್ಕಳು ಯಾವ ಯಾವ ಕೆಲಸದಲ್ಲಿ ನಿಯುಕ್ತರಾಗಿರುತ್ತಾರೆ?
19. ಸಂಪತ್ತನ್ನು ಕಾಪಾಡಲು ಎದುರಾಗುವ ಕಷ್ಟಗಳೇನು?
20. ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಯಾವ ಕ್ಷೇತ್ರಗಳು ಸ್ವಯಂ ಆಡಳಿತ ಕ್ಷೇತ್ರಗಳಾದವು?
21. ಶಿಕ್ಷಣದ ಬಗ್ಗೆ ವಿಶ್ವೇಶ್ವರಯ್ಯ ಅವರು ಏನೆಂದು ಹೇಳಿದ್ದಾರೆ?
22. ಕವಿ ಕುವೆಂಪುರವರಿಗೆ ಅಗಸದಿಂದ ಸಂಜೆಯ ಬಿಸಿಲವರೆಗೂ ಎಲ್ಲೆಲ್ಲಿ ಹಸುರು ಕಂಡುಬಂದಿದೆ?
23. ಪಾರ್ಥ–ಭೀಮರ ಬಗೆಗೆ ದುರ್ಯೋಧನನ ಅಭಿಪ್ರಾಯವೇನು?
24. ಅಂದವಾದ ಬರೆವಣಿಗೆಯ ಬಗ್ಗೆ ಗಾಂಧೀಜಿಯವರ ಅಭಿಪ್ರಾಯವೇನು?
25. ಭಗತ್ ಸಿಂಗ್ ತನಗೆ ಪ್ರಿಯವಾದ ಮಾವಿನ ಹಣ್ಣೊಂದನ್ನು ನಿರಾಕರಿಸಿದ್ದಕ್ಕೆ ಕಾರಣ ಹೇಗೆ ತಿಳಿಯಿತು?
26. ಪೈಗಳ ತಮ್ಮನ ನೂಲುಮದುವೆಯ ದಿನ ಅಂಗಳದಲ್ಲಿ ಏನೇನು ಸಿದ್ಧತೆಗಳಾಗುತ್ತಿದ್ದವು?
27. ಮಲೆನಾಡಿನಲ್ಲಿ ದೀಪದ ಬತ್ತಿಯ ಸಮಸ್ಯೆಯನ್ನು ಹೇಗೆ ಪರಿಹರಿಸಿಕೊಳ್ಳಲಾಯಿತು?

**V** ಕೆಳಗಿನ ಕವಿಗಳ/ಸಾಹಿತಿಗಳ ಜನ್ಮಸ್ಥಳ, ಕಾಲ, ಕೃತಿ ಮತ್ತು ಬಿರುದು/ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ. **2x3=6**

28. ವಿ.ಕೃ.ಗೋಕಾಕ್ 29. ಪಂಪ

**VI** ಕೆಳಗಿನ ಪದ್ಯ ಭಾಗಕ್ಕೆ ಪ್ರಸ್ತಾರ ಹಾಕಿ ಗಣ ವಿಭಾಗ ಮಾಡಿ ಛಂದಸ್ಸಿನ ಹೆಸರನ್ನು ಬರೆಯಿರಿ. **1x3=3**

30. ಅಂತೆಂಬನಾರ್ಗೆ ಪಿರಿದುಂ
ಭ್ರಾಂತು ದಲೇಂ ದ್ರೋಣನೆಂಬನೇಂ ಪಾರ್ವನೆ ಪೇ

**VII** ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು, ಸಮನ್ವಯಗೊಳಿಸಿ **1x3=3**

31. "ಭೀಮದುರ್ಯೋಧನರು ಮದಗಜಗಳಂತೆ ಹೋರಾಡಿದರು"

**VIII** ಕೆಳಗಿನ ಗಾದೆಗಳಲ್ಲಿ ಯಾವುದಾದರೂ ಒಂದನ್ನು ಗಾದೆಯ ಮಹತ್ತ್ವದೊಂದಿಗೆ ವಿಸ್ತರಿಸಿ ಬರೆಯಿರಿ. **1x3=3**

**32.** ತಾಳಿದವನು ಬಾಳಿಯಾನು. ಅಥವಾ ಮನಸಿದ್ದರೆ ಮಾರ್ಗ.

**IX** ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ. **6x3=18**

**33.** "ನಾನಾಕೆಯನ್ನು ಪರೀಕ್ಷಿಸುವೆ, ನೀವು ಬಿಸಿ ನೀರು ಸಿದ್ಧಪಡಿಸಿ."

**34.** "ಅವಂತಿ ಸುಕುಮಾರನೆಂದು ಪೆಸರನಿಟ್ಟಂ"

**35.** "ಹುಸಿಯದ ಬೇಹಾರಿಯೇ ಇಲ್ಲ."

**36.** "ಎಲ್ಲ ಜನರಿಗೆ ಜೋರ ಮಾಡಿ ಕಸಿದು ಕೊಳ್ಳಿರಿ ಹತಾರ"

**37.** "ನೆಲಕಿಜೆವೆನೆಂದು ಬಗೆದಿರೆ ಚಲಕಿಜೆವೆಂ"

**38.** "ತನ್ನ ಮಾತೆಯಂ ಸರ್ವಜನಮುಂ ಬಂಜೆಯೆನ್ನದಿರ್ದಪುದೆ"

**X.** ಕೊಟ್ಟಿರುವ ಪದ್ಯ ಭಾಗವನ್ನು ಪೂರ್ಣಗೊಳಿಸಿ. **1x4=4**

**39.** ಕಲುಷಿತವಾದೀ ..............................

.........................................................

.........................................................

........................................ ಮುಟ್ಟೋಣ

ಅಥವಾ

ಮತಗಳೆಲ್ಲವೂ------------

---------------------

----------------------

-----------------ಬಿತ್ತೋಣ

**XI** ಕೆಳಗಿನ ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು, ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶ ಬರೆಯಿರಿ. **1x4=4**

**40.**
ನೀಲಮೇಘಮಂಡಲ-ಸಮ ಬಣ್ಣ
ಮುಗಿಲಿಗೆ ರೆಕ್ಕೆಗಳೊಡೆದವೊ ಅಣ್ಣಾ
ಚಿಕ್ಕೆಯಮಾಲೆಯ ಸೆಕ್ಕಿಸಿಕೊಂಡು
ಸೂರ್ಯ-ಚಂದ್ರರನು ಮಾಡಿದೆ ಕಣ್ಣಾ
ಹಕ್ಕಿ ಹಾರುತಿದೆ ನೋಡಿದಿರಾ?

**XII** ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ. **2x4=8**

**41.** ಶಬರಿಯ ಸಡಗರ, ಸಂತೋಷ ಮೇಳದವರ ಹಾಡಿನಲ್ಲಿ ಹೇಗೆ ವರ್ಣಿತವಾಗಿದೆ?

ಅಥವಾ

ನಂಬಿಕೆಟ್ಟವರಿಲ್ಲ ಎಂಬ ಮಾತು ಶಬರಿಯ ಪಾಲಿಗೆ ಹೇಗೆ ನಿಜವಾಗಿದೆ?

**42.** ಕರ್ಣನಿಗೆ ಶ್ರೀಕೃಷ್ಣನು ಒಡ್ಡಿದ ಆಮಿಷಗಳೇನು?

ಅಥವಾ

ಪಾಂಡವರು ಸೋದರರರೆಂದು ತಿಳಿದಾಗ ಕರ್ಣನ ಮನಸ್ಥಿತಿಯನ್ನು ತಿಳಿಸಿ.

**XIII.** ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರವನ್ನು ಬರೆಯಿರಿ. **2+2=4**

ಆಲೂರು ವೆಂಕಟರಾಯರು ಅಖಂಡ ಕರ್ನಾಟಕದ ಕನಸನ್ನು ನನಸಾಗಿಸಲು ಹೋರಾಟ ನಡೆಸುತ್ತಾ ಸ್ವತಂತ್ರ ಭಾರತದ ಹೋರಾಟದಲ್ಲಿಯೂ ಭಾಗವಹಿಸಿದ್ದರು. "ಭಾರತವನ್ನು ಬಿಟ್ಟು ಕರ್ನಾಟಕವಿಲ್ಲ; ಕರ್ನಾಟಕವನ್ನು ಬಿಟ್ಟು ಭಾರತವಿಲ್ಲ" ಎಂಬುದು ಅವರ ಸ್ಪಷ್ಟ ನಿಲುವಾಗಿತ್ತು. ಅಂದು ವಿದೇಶಿ ವಸ್ತುಗಳ ಮಾರಾಟದಿಂದ ಸ್ವದೇಶಿ ವಸ್ತುಗಳ ಮಾರಾಟ ಕಡಿಮೆಯಾಗಿ ನಮ್ಮ ಅನೇಕ ಕೈಗಾರಿಕೆಗಳು ಮೂಲೆ ಸೇರುತ್ತಾ ಬಂದವು. ಇದನ್ನು ಪ್ರತಿಭಟಿಸಲು ತಲೆ ಎತ್ತಿದ "ವಿದೇಶಿ ವಸ್ತುಗಳ ಬಹಿಷ್ಕಾರ; ಸ್ವದೇಶಿ ವಸ್ತುಗಳ ಪುರಸ್ಕಾರ" ಚಳವಳಿಯಲ್ಲಿ ದುಮುಕಿ ಮಂಗಳೂರು ಹೆಂಚು ಮತ್ತು ಸೀಸದ ಕಡ್ಡಿ ತಯಾರಿಸುವ ಕಾರ್ಖಾನೆಗಳ ಸ್ಥಾಪನೆಗೆ ಜನರನ್ನು ಹುರಿದುಂಬಿಸಿದರಲ್ಲದೆ ತಾವೂ ಸ್ಥಾಪಿಸಿ, ಮಾದರಿಯಾದರು. ಮಕ್ಕಳ ವ್ಯಕ್ತಿತ್ವವನ್ನು ರೂಪಿಸುವಲ್ಲಿ ಶಿಕ್ಷಣದ ಪಾತ್ರ ದೊಡ್ಡದು. ಆದರೆ ಭಾರತೀಯರು ಪಡೆಯುತ್ತಿದ್ದ ಶಿಕ್ಷಣ ಅವರಿಗೆ ಸ್ವದೇಶವನ್ನೂ, ಸ್ವದೇಶ ಸಂಸ್ಕೃತಿಯನ್ನೂ ಮರೆಸುತ್ತಲಿದ್ದಿತು. ಈ ಅಪಾಯವನ್ನು ತಪ್ಪಿಸಲು ನಮ್ಮ ದೇಶ, ನಮ್ಮ ಸಂಸ್ಕೃತಿಗಳನ್ನು ಪೋಷಿಸುವ 'ರಾಷ್ಟ್ರೀಯ ಶಿಕ್ಷಣ ಚಳವಳಿ'ಯು ಆಗ ಭಾರತದಲ್ಲೆಲ್ಲಾ ವ್ಯಾಪಿಸಿದ್ದಿತು. ವೆಂಕಟರಾಯರು ಈ ಚಳವಳಿಯಲ್ಲಿಯೂ ದುಮುಕಿ ಧಾರವಾಡದಲ್ಲಿ 'ಕರ್ನಾಟಕ ನೂತನ ವಿದ್ಯಾಲಯ' ಎಂಬ ರಾಷ್ಟ್ರೀಯ ವಿದ್ಯಾಲಯವನ್ನು ಸ್ಥಾಪಿಸಿದರು.

ಪ್ರಶ್ನೆಗಳು : ಅ) ಆಲೂರು ವೆಂಕಟರಾಯರು ಸ್ವದೇಶಿ ಚಳವಳಿಯ ಮೂಲಕ ಹೇಗೆ ಮಾದರಿ ಎನಿಸಿದರು?

ಬ) ಆಲೂರು ವೆಂಕಟರಾಯರು ರಾಷ್ಟ್ರೀಯ ವಿದ್ಯಾಲಯವನ್ನು ಸ್ಥಾಪಿಸಲು ಕಾರಣವೇನು?

**XI**ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುತ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ. 1*5=5

ನಿಮ್ಮನ್ನು ಚಿತ್ರದುರ್ಗದ ಎಸ್.ಬಿ.ಆರ್.ಹೆಚ್.ಎಸ್, ಪ್ರೌಢಶಾಲೆಯ 'ಸಂಕಲ್ಪ' ಎಂದು ಭಾವಿಸಿಕೊಂಡು, ನಿಮ್ಮ ಶಾಲೆಗೆ ಶುದ್ಧ ಕುಡಿಯುವ ನೀರಿನ ಘಟಕ ಸ್ಥಾಪಿಸುವಂತೆ ಕೋರಿ ಪುರಸಭೆಯ ಅಧ್ಯಕ್ಷರಿಗೆ ಒಂದು ಮನವಿ ಪತ್ರ ಬರೆಯಿರಿ. ಅಥವಾ

ನಿಮ್ಮನ್ನು ರಾಮನಗರ ಜಿಲ್ಲೆಯ ಕನಕಪುರದ ಆದರ್ಶ ವಸತಿ ಶಾಲೆಯ ವಿದ್ಯಾರ್ಥಿ 'ಯಶಸ್' ಎಂದು ಭಾವಿಸಿಕೊಂಡು, ನಿಮ್ಮ ವಿದ್ಯಾಭ್ಯಾಸದ ಪ್ರಗತಿಯನ್ನು ತಿಳಿಸಿ, ಮಳವಳ್ಳಿಯ ನಿವಾಸಿಯಾದ ನಿಮ್ಮ ತಂದೆ ಮಂಜಪ್ಪ ಎಂಬುವವರಿಗೆ ಪತ್ರ ಬರೆಯಿರಿ.

**XI**ಕೆಳಗಿನ ಯಾವುದಾದರೂ ಒಂದು ವಿಷಯದಲ್ಲಿ ಹದಿನೈದು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧ ಬರೆಯಿರಿ. **1*5=5**

**45.** ರಾಷ್ಟ್ರೀಯ ಹಬ್ಬಗಳ ಮಹತ್ತ್ವ ಅಥವಾ ಗ್ರಂಥಾಲಯಗಳ ಮಹತ್ತ್ವ